## ಭಾಗ–ಎರಡು

ರಾವ್‌ಜೀಭಾಯಿ ಒಂದು ಪ್ರಕ್ಷುಬ್ಧ ಗಳಿಗೆಯಲ್ಲಿ ಸೊಸೈಟಿಯ ಸೆಕ್ರೆಟರಿಯನ್ನು ಕಾಣಲು ನಿಶ್ಚಯಿಸಿ ಅವನ ಮನೆಗೆ ಬಂದದ್ದು ಅವನಿಗೆ ತನ್ನ ಪರಿಚಯ ಹೇಳಬೇಕು, ಆ ಹುಡುಗ ಇನ್ನೊಮ್ಮೆ ಬಂದಾಗ ಚೌಕೀದಾರ ಇವತ್ತು ಓಡಿಸಿದ ಹಾಗೆ ಓಡಿಸದೆ ತನ್ನ ಭೇಟಿಯಾಗುವಂತೆ ಮಾಡಿಸಬೇಕು ಎಂದು ಕೇಳಿಕೊಳ್ಳಲು. ಸೆಕ್ರೆಟರಿಯಾದ ಸೋರಾಬಜೀ ಪಟೇಲ ರಾವ್‌ಜೀಭಾಯಿಯನ್ನು ಖುದ್ದು ಕಂಡಿರಲಿಲ್ಲ. ಆದರೂ ಅವನ ವೃತ್ತಾಂತವನ್ನು ಅವನ ಮಕ್ಕಳ ಮುಖಾಂತರ ಕೇಳಿ ಬಲ್ಲವನಾಗಿದ್ದ. ಅದನ್ನು ಕೇಳಿದ ನಂತರ ಅವನೇ ಮುಂದಾಗಿ ರಾವ್‌ಜೀಭಾಯಿಯ ಹಿರಿಯ ಮಗ ಜಿತೇಂದ್ರ ಶಹನಿಗೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಜಾಧವನ ಪರಿಚಯ ಮಾಡಿಸಿದ್ದ. ಜಿತೇಂದ್ರ ಶಹ ಹಾಗೂ ಸೋರಾಬಜೀ ಪಟೇಲ ಇಬ್ಬರೂ ವಕೀಲರು. ಜಮಶೇದಜೀಯೇ ಹಲವು ವರ್ಷಗಳ ಪರಿಶ್ರಮದಿಂದ ಕಟ್ಟಿದ ಒಂದು ನಾಮಾಂಕಿತ ಸೊಲಿಸಿಟರ್ಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ. ಈಗಿನ ಸೊಸೈಟಿಯಲ್ಲಿ ಜಿತೇಂದ್ರನಿಗೆ ಮನೆ ದೊರಕಿದ್ದು ಕೂಡ ಸೋರಾಬಜೀಯ ಮೂಲಕವೇ. ಸಾಂತಾಕ್ರೂಝಿನಲ್ಲಿ ಹಿರಿಯರಿಂದ ಬಳುವಳಿಯಾಗಿ ಬಂದ – ಹಳೆಯದಾದರೂ ಬಂಗಲೆಯ ಹಾಗಿರುವ – ದೊಡ್ಡ ಮನೆಯನ್ನು ಬಿಟ್ಟುಕೊಟ್ಟು ಬಾಂದ್ರಾದ ಈ ಸಣ್ಣ ಫ್ಲ್ಯಾಟಿಗೆ ಬರಲು ಮನಸ್ಸು ಮಾಡಿದ್ದಕ್ಕೆ ಕಾರಣ ವಿವರಿಸುವಾಗಲೇ ಜಿತೇಂದ್ರ ಅಪ್ಪನ ಕತೆಯನ್ನು ಸೋರಾಬಜೀಗೆ ಹೇಳಿದ್ದ. ಮನುಷ್ಯ ತನ್ನ ಭಾವನೆಗಳನ್ನು ಎಲ್ಲಿ ತೊಡಗಿಸಬೇಕು, ಎಲ್ಲಿ ತೊಡಗಿಸಕೂಡದು ಎನ್ನುವುದನ್ನು ಕುರಿತು ತನ್ನವೇ ಆದ ವಿಚಾರವುಳ್ಳ ಸೋರಾಬ, ರಾವ್‌ಜೀಭಾಯಿಯ ಕತೆಯಂಥ ವಿಕ್ಷಿಪ್ತ ಕತೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಕೃತಿಯವನು ಅಲ್ಲವೇ ಅಲ್ಲ. ಇಂದಿನ ಜಗತ್ತಿನಲ್ಲಿ ನಮ್ಮ ಕರ್ತೃತ್ವ ಶಕ್ತಿಯ ಅನವ್ರಯಕ್ಕೆ ಅವಕಾಶ ಕೊಡಕೂಡದು ಎನ್ನುವ 'ಪ್ರಾಕ್ಟಿಕಲ್' ದೃಷ್ಟಿಕೋನದ ಸೋರಾಬನ ಮೇಲೆ ಈ ಕತೆ ಮಾಡಿದ ಪರಿಣಾಮವೆಂದರೆ ರಾವ್‌ಜೀಭಾಯಿ ಮತ್ತೆ ಓಡಿಹೋಗದ ಹಾಗೆ ಮಾಡುವ, ಓಡಿಹೋದರೂ ಮನೆಯವರನ್ನು ಮುಜುಗರಕ್ಕೆ ಸಿಕ್ಕಿಸುವ ಸನ್ನಿವೇಶ ಹುಟ್ಟುವ ಮೊದಲೇ ಹುಡುಕಿ–ತೆಗೆಯುವ ಉಪಾಯವನ್ನು ಕಂಡುಹಿಡಿಯುವಂತೆ ಅದು ಆಹ್ವಾನಿಸಿದ್ದು ಜಿತೇಂದ್ರ ಸಬ್ ಇನ್‌ಸ್ಪೆಕ್ಟರ್ ಜಾಧವನನ್ನು ಕಂಡದ್ದು ಈ ಉಪಾಯದ ಅಂಗವಾಗಿ. ಜಾಧವನ ಸೂಚನೆಯ ಮೇರೆಗೆ ರಾವ್‌ಜೀಭಾಯಿಯ ಫೋಟೊದ ಜೊತೆಗೆ ಅವನು ಈ ಮೊದಲು ಓಡಿಹೋದ ಸಂದರ್ಭದ ಸಂಕ್ಷಿಪ್ತ ಲಿಖಿತ ವರದಿಯನ್ನೂ ಒಪ್ಪಿಸಿ ಬಂದಿದ್ದ.

ರಾವ್‌ಜೀಭಾಯಿ ತನ್ನ ಮಗನ ಜೊತೆಗೆ ಹೊರಟು ಹೋದ ಮೇಲೆ ಪಾರಸೀ ದಂಪತಿಗೆ ರಾವ್‌ಜೀಭಾಯಿ ಈ ಮೊದಲೂ ಅನೇಕಬಾರಿ ಕಾಣೆಯಾದುದರ ಬಗ್ಗೆ ತಿಳಿಯುವ ಕುತೂಹಲವಾಯಿತು:

''ಯಾಕೆ? ಆ ಮುದುಕ ಗಂಟೆಗಳ ಕಾಲ ಇಲ್ಲಿ ಕೂತು ಕಾಣೆಯಾದ ತನ್ನ ಮಗನ ಬಗ್ಗೆ ಮಾತನಾಡುತ್ತಿದ್ದನಂತೆ?'' ಜಾಧವ ಆಶ್ಚರ್ಯ ವ್ಯಕ್ತಪಡಿಸಿದ.

''ಹೌದು! ಆದರೆ ತಾನೇ ಕಾಣೆಯಾದುದರ ಬಗ್ಗೆ ಚಕಾರವೆತ್ತಲಿಲ್ಲ!''

ಅವನು ನಿಜಕ್ಕೂ ಹೇಳಿದ ಸಂಗತಿಗಳನ್ನು ಜಾಧವನಿಗೆ ತಿಳಿಸುವ ಧೈರ್ಯ ಜಮಶೇದನಿಗೆ ಕೂಡಲೇ ಆಗಲಿಲ್ಲ. ರಾತ್ರಿ ಫ್ರೇನಿಯನ್ನು ಮಾತನಾಡಿಸಿದ ನಂತರವೇ ತಾನು ಕೇಳಿದ್ದನ್ನು ಅವನು ನಂಬುವವನಿದ್ದ! ಸದ್ಯಕ್ಕೆ ''ಇಲ್ಲ ಎನ್ನುವುದಕ್ಕೆ ಏನೋ ಒಂದು ವಿಚಿತ್ರ ಗಳಿಗೆಯಲ್ಲಿ ಜೀವದ ಮೇಲೇ ಬೇಸರ ಬಂದಾಗ ಹೆಂಡತಿ ಮಕ್ಕಳ ಕಬೂಲಿ ಪಡೆದು ಕೆಲವು ವರ್ಷಗಳ ತೀರ್ಥಯಾತ್ರೆ